ಒ.ಎಸ್ ನಂಃ **141/2023**
ಪಿ.ಡಬ್ಲ್ಯೂಃ **2**

ದಿನಾಂಕಃ **17-01-2026** ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಸ್.ಆರ್.ಕೆ ವಕೀಲರಿಂದಃ

ನನಗೆ ಕನ್ನಡ ಓದಲು-ಬರೆಯಲು ಬರುತ್ತದೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳ ಬಗ್ಗೆ ನನಗೆ ಮಾಹಿತಿ ಇದೆ. ನಿಮ್ಮ ಪ್ರಮಾಣ ಪತ್ರದಲ್ಲಿನ ವಿಷಯವನ್ನು ಯಾರು ಹೇಳಿ ಬರೆಸಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ದಾವೆಯನ್ನು ವಾದಿ ಜಮೀನಿಗೆ ಸಂಬಂಧಿಸಿದಂತೆ ಪ್ರತಿವಾದಿಯ ವಿರುದ್ಧ ದಾಖಲಿಸಿದ್ದಾರೆ. ನನ್ನ ಜಮೀನು ಈ ಕಡೆಗೆ ಹಾಗೂ ಪ್ರತಿವಾದಿಯ ಜಮೀನು ಆ ಕಡೆಗೆ ಬರುತ್ತದೆ ಎಂದು ವಾದಿ ಈ ದಾವೆ ದಾಖಲಿಸಿದ್ದಾರೆ. ದಾವಾ ಜಮೀನು ಸರ್ವೆ ನಂ.3 ಇರುತ್ತದೆ. ಆದರೆ ನನಗೆ ದಾವಾ ಜಮೀನಿನ ವಿಸ್ತೀರ್ಣ ಗೊತ್ತಿಲ್ಲ.

2. ದಾವಾ ಜಮೀನಿನ ಪೂರ್ವಕ್ಕೆ ಪ್ರತಿವಾದಿಯ ಜಮೀನು, ಪಶ್ಚಿಮಕ್ಕೆ ಶರಣಪ್ಪ ರವರ ಜಮೀನು, ಉತ್ತಕ್ಕೆ ನಾಲ ಹಾಗೂ ದಕ್ಷಿಣಕ್ಕೆ ರಸ್ತೆ ಇದೆ. ನಾನು ವ್ಯವಸಾಯಗಾರನಾಗಿದ್ದೇನೆ. ನನಗೆ ವಾದಿ ಹಾಗೂ ಪ್ರತಿವಾದಿಯ ಪರಿಚಯ ಇದೆ. ನಾನು ಬಳಿಚಕ್ರ ಗ್ರಾಮದಲ್ಲಿಯೇ ಹುಟ್ಟಿ ಬೆಳೆದಿರುತ್ತೇನೆ. 2014 ರಲ್ಲಿ ವಾದಿ ಹಣದ ಅವಶ್ಯಕತೆಗಳಿಗಾಗಿ ಪ್ರತಿವಾದಿಗೆ ಜಮೀನು ಮಾರಾಟ ಮಾಡುವುದಾಗಿ ಮಾತು-ಕತೆ ಮಾಡಿದ್ದರು ಎಂದರೆ ಸರಿಯಲ್ಲ, ದಿನಾಂಕ 09.07.2014 ರಂದು ಸದರಿ ಮಾತು-ಕತೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ವಾದಿ ದಾವಾ ಜಮೀನನ್ನು ಪ್ರತಿವಾದಿಗೆ ರೂ.50 ಸಾವಿರ ಮೊತ್ತಕ್ಕೆ ಮಾರಾಟ ಮಾಡುವುದಾಗಿ ಒಪ್ಪಿಕೊಂಡಿದ್ದರು ಎಂದರೆ ಸರಿಯಲ್ಲ. ಆ ಪ್ರಕಾರ ದಿನಾಂಕ 11.07.2014 ರಂದು ವಾದಿ ಪ್ರತಿವಾದಿಗೆ ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಕರಾರು ಪತ್ರವನ್ನು ರೂ.100/- ಮೊತ್ತದ ಛಾಪಾ ಕಾಗದದ ಮೇಲೆ ಬರೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿ ಪ್ರತಿವಾದಿಯಿಂದ ರೂ.50 ಸಾವಿರ ಹಣ ಪಡೆದು ಕರಾರು ಪತ್ರಕ್ಕೆ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಕರಾರು ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಹಾಕಿರುತ್ತೇನೆ

ಎಂದರೆ ಸರಿಯಲ್ಲ. ಸಾಬಣ್ಣ ತಂದೆ ಬಸಲಿಂಗಪ್ಪ, ಸಿದ್ರಾಮಪ್ಪ ತಂದೆ ಮಲ್ಲಯ್ಯ ಬೊಯಿನ್, ಸಾಬಣ್ಣ ಮೂಡಾಳ್ ಹಾಗೂ ನಿಂಗಪ್ಪ ನಂದವಾರ್ ರವರು ಸಹ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆ ನಂತರ ಗ್ರಾಮದಲ್ಲಿ ವಾದಿಗೆ ಪ್ರತಿವಾದಿ ಕ್ರಯ ಕರಾರು ಪತ್ರ ಬರೆದು ಕೊಡುವ ವಿಷಯಕ್ಕೆ ಸಂಬಂಧಿಸಿದಂತೆ ಪಂಚಾಯಿತಿ ಆಗಿರುತ್ತದೆ ಎಂದರೆ ಸಾಕ್ಷಿ ಆ ರೀತಿ ಪಂಚಾಯಿತಿ ಆಗಿರುವುದು ನನಗೆ ಗೊತ್ತು ಆದರೆ ಹಣ ನೀಡಿರುವ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ನಂತರ ಪ್ರತಿವಾದಿ ವಾದಿಯ ವಿರುದ್ಧ ನಿರ್ದಿಷ್ಟ ಕರಾರು ಪಾಲನೆಗಾಗಿ ದಾವೆ ದಾಖಲು ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯ ನಂ.210/2023 ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸದರಿ ದಾವೆಯಲ್ಲಿ ಈ ದಾವೆಯ ಪ್ರತಿವಾದಿಯ ಪರವಾಗಿ ಸಾಕ್ಷ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಗಿದೆ.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಸಿವಿಲ್ ಮತ್ತು ಜೆ.ಎಂ.ಎಫ್.ಸಿ
ನ್ಯಾಯಾಧೀಶರು ಯಾದಗಿರಿ